# ಪರಿಸರದ ಕೆಲಸ ದೇವರ ಕೆಲಸ



ಮಡಿಕೇರಿ ಆಕಾಶವಾಣಿ ಕೇಂದ್ರದ ಅಧಿಕಾರಿ ವಿಜಯ್ ಅಂಗಡಿ ತಮ್ಮ ಪರಿಸರ ಪ್ರೇಮದ ಕಾರಣದಿಂದಾಗಿ ಹೆಸರಾದವರು. ಕಚೇರಿ ಆವರಣದಲ್ಲಿ ಅವರು ನೆಟ್ಟು ಬೆಳೆಸಿದ ಹಲವು ಗಿಡಗಳು ಫಲಪುಷ್ಪ ತೊಟ್ಟು ಕಂಗೊಳಿಸುತ್ತಿವೆ. ಸರ್ಕಾರಿ ಕಚೇರಿಯೊಂದಿಗೆ ಸಾಮಾನ್ಯವಾಗಿ ತಳಕು ಹಾಕಿಕೊಳ್ಳುವ ಜಡತೆಯನ್ನು ಆ ಹಸಿರುಸಿರಿ ನಿವಾರಿಸಿದೆ.

■ ಸಹನಾ ಕಾಂತಬೈಲು

ಸಾರ್ವಜನಿಕ ಸ್ಥಳದಲ್ಲಿ ಗಿಡಮರಗಳನ್ನು ನೆಟ್ಟು ಪರಿಸರ ಸಂರಕ್ಷಣೆಗೆ ನಿಸ್ವಾರ್ಥ ಮನಸ್ಸಿನಿಂದ ದುಡಿವವರು ವಿರಳ. ಇಂಥ ವಿರಳ ವರ್ಗಕ್ಕೆ ಸೇರಿದವರು ಮಡಿಕೇರಿ ಆಕಾಶವಾಣಿಯ ಕಾರ್ಯಕ್ರಮ ನಿರ್ವಾಹಕ ಡಾ. ವಿಜಯ್ ಅಂಗಡಿ. ಆಕಾಶವಾಣಿಯ ವಿಶಾಲ ಆವರಣದಲ್ಲಿ ವಿವಿಧ ಬಗೆಯ ಸಸ್ಯಗಳನ್ನು ಬೆಳೆಸಿ ನಂದನವನ ಮಾಡಿದ್ದಾರೆ. ರೈತರಲ್ಲಿ, ಆಕಾಶವಾಣಿಗೆ ಭೇಟಿ ಕೊಡುವ ಸಾರ್ವಜನಿಕರಲ್ಲಿ ಸಸ್ಯ ಪ್ರೀತಿ ಬೆಳೆಸಿ ಪರಿಸರ ಜಾಗೃತಿ ಮೂಡಿಸುತ್ತಿದ್ದಾರೆ.

ಪರಿಸರ ರಕ್ಷಣೆಯಲ್ಲಿ ವಿಜಯ್ ಅಂಗಡಿ ಅವರಿಗೆ ಅಪಾರ ಕಾಳಜಿ. ಗಿಡ ನೆಡುವುದು ಮಾತ್ರವಲ್ಲ, ನೆಟ್ಟ ಗಿಡಗಳನ್ನು ಪೋಷಿಸುವ ಕಾರ್ಯದಲ್ಲೂ ನಿರತರಾಗಿದ್ದಾರೆ.

ವಿಜಯ್ ಅಂಗಡಿ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಎಂ.ಬಿ. ಅಯ್ಯನಹಳ್ಳಿ ಗ್ರಾಮದವರು. ಹಾಸನ ಆಕಾಶವಾಣಿ ಕೇಂದ್ರದಲ್ಲಿ 27 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದರು. ಮಡಿಕೇರಿ ಆಕಾಶವಾಣಿಗೆ 2018ರಲ್ಲಿ ಬಂದರು. ಆಗ ಅವರು ಅಲ್ಲಿನ ಒಂದೂವರೆ ಎಕರೆ ವಿಸ್ತೀರ್ಣದ ಭೂಮಿ ನಿರ್ವಹಣೆಯಿಲ್ಲದೆ ಸೊರಗುತ್ತಿರುವುದನ್ನು ಮನಗಂಡರು. ಆ ಭೂಮಿ ಹುಲ್ಲು, ಕಳೆಸಸ್ಯಗಳಿಂದ ತುಂಬಿತ್ತು. ಆ ಕಳೆಯನ್ನೆಲ್ಲ ಕಿತ್ತು ಸ್ವಚ್ಛ ಮಾಡಿ, ಅಲ್ಲಿ ಗಿಡಮರಗಳನ್ನು ನೆಟ್ಟು ಬೆಳೆಸಬೇಕು ಅಂದುಕೊಂಡರು. ತಕ್ಷಣ ಅದನ್ನು ಕಾರ್ಯರೂಪಕ್ಕೆ ಇಳಿಸಿಯೂ ಬಿಟ್ಟರು.

ಬಿಡುವಿನ ವೇಳೆಯಲ್ಲಿ ಖಾಲಿ ಜಾಗದಲ್ಲಿ ಸಸಿಗಳನ್ನು ನೆಡಲು ಆರಂಭಿಸಿದರು. ಈಗ ಅಲ್ಲಿ ನೂರಕ್ಕಿಂತ ಅಧಿಕ ಜಾತಿಯ ಗಿಡಗಳಿವೆ. 'ರಾತ್ರಿ 11 ಗಂಟೆವರೆಗೆ ಗಿಡ ನೆಟ್ಟದ್ದೂ ಉಂಟು. ಅಂಜೂರ, ಮಾವು, ಕಿತ್ತಳೆ ಮುಂತಾದ ಹಣ್ಣಿನ ಗಿಡಗಳನ್ನು 250–300 ರೂಪಾಯಿ ಕೊಟ್ಟು ತಂದಿದ್ದೇನೆ. ಕಚೇರಿಯಿಂದ ಯಾವುದಕ್ಕೂ ದುಡ್ಡು ತೆಗೆದುಕೊಂಡಿಲ್ಲ. ನನ್ನ ಸ್ವಂತದ ಹಣ ಸಾವಿರಾರು ರೂಪಾಯಿ ವೆಚ್ಚ ಮಾಡಿದ್ದೇನೆ' ಎಂದವರು ಹೇಳುತ್ತಾರೆ.

ವಿಜಯ್ ಅಂಗಡಿ ಅವರಿಗೆ ಆಕಾಶವಾಣಿ ಕೃಷಿ ಕಾರ್ಯಕ್ರಮ ನಿರ್ವಹಣೆಯ ಜತೆಗೆ ಬೇಸಾಯ, ತೋಟಗಾರಿಕೆಯಲ್ಲಿ ಅಪಾರ ಆಸಕ್ತಿ. ಅವರ ಮೂರು ವರ್ಷಗಳ ಪರಿಶ್ರಮದಿಂದ ವಿವಿಧ ಜಾತಿಯ ಹಣ್ಣಿನ ಮರಗಳು, ಔಷಧ ಸಸ್ಯಗಳು, ಬಗೆಬಗೆಯ ಹೂವಿನ ಗಿಡಗಳು ಸೇರಿದಂತೆ ನೂರಾರು ಬಗೆಯ ಸಸ್ಯ ರಾಶಿ ಆಕಾಶವಾಣಿ ಆವರಣದಲ್ಲಿ ರಾರಾಜಿಸುತ್ತಿದೆ.

## ಆಕಾಶವಾಣಿ, ಪರಿಸರ ಸಮಾಚಾರ...

